**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.</u>**

**ಅಪರಾಧ ಪ್ರಕರಣ ಸಂಖ್ಯೆ: 678/2021**

| | | |
|---|---|---|
| **ಹೆಸರು** | ಬಸವರಾಜು | ಚಾಸಾ-5 |
| **ತಂದೆಯ ಹೆಸರು** | ಕಾಡಯ್ಯ | |
| **ಉದ್ಯೋಗ** | ವ್ಯವಸಾಯ | ಪ್ರಾಸಾ-6 |
| **ವಾಸ ಸ್ಥಳ** | ಯಗಟಿ ಗ್ರಾಮ | |
| **ದಿನಾಂಕ: 27.09.2024**ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ:</u>**

ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

1) ನಿಪಿ 1 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ 1(ಇ) ಎಂದು ಗುರುತಿಸಲಾಯಿತು.

ನಿಪಿ 1(ಇ) ರಲ್ಲಿರುವ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ. ಸದರಿ ಸಹಿಯನ್ನು ಯಾವ ವಿಚಾರಕ್ಕೆ ಹಾಕಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ದಿನಾಂಕ 20.01.2021 ರಂದು ಸದರಿ ಸಾಕ್ಷಿಯು ನೀಡಿದ ಹೇಳಿಕೆಯನ್ನು **ನಿಪಿ 8** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಯ ಸಾಕ್ಷಿಗೆ ಭಾಗಶ: ಪ್ರತಿಕೂಲ ಸಾಕ್ಷಿಯನ್ನು ನುಡಿಯುತ್ತಿರುವುದರಿಂದ ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು, ಪಾಟೀ ಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು)**

**<u>ಪಾಟೀ ಸವಾಲು: ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕ ರವರಿಂದ.</u>**

ದಿನಾಂಕ 20.01.2021 ರಂದು ರಾತ್ರಿ 8.20 ಕ್ಕೆ ನಾನು ಮತ್ತು ಬಸವರಾಜು ರವರು ನಮ್ಮ ಗ್ರಾಮದ ಶಾಲೆಯ ಬಳಿ ಹೋಗುತ್ತಿದ್ದಾಗ ಅರಕಲಗೂಡು ಪೊಲೀಸರು ಬಸವರಾಜು ರವರು ಬಂದು ಅವರ ಸಿ.ಪಿ.ಐ ರವರು ಅವರನ್ನು ಕರೆಯುತ್ತಿದ್ದಾರೆ ಎಂದು ಹೇಳಿರುವುದಿಲ್ಲ. ಅವರು ನನಗೆ ಯಗಟಿ ಗ್ರಾಮದ ನಾಗರಾಜು ರವರ ಮಗ ದಿನೇಶ ರವರು ಪೆಟ್ಟಿಗೆ ಅಂಗಡಿಯ ಮುಂದೆ ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿಕೊಂಡು ಸಾರ್ವಜನಿಕರಿಗೆ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಹೇಳಿದರು ಎಂದರೆ ಸರಿಯಲ್ಲ ಮತ್ತು ಆ ವಿಚಾರವಾಗಿ ನಾವು ಆ ಸ್ಥಳವನ್ನು ದಾಳಿ ಮಾಡಬೇಕಾಗಿದ್ದು ಆ ಸಮಯದಲ್ಲಿ ನನ್ನನ್ನು ಪಂಚರಾಗಿ ತನಿಖೆಗೆ

ಸಹಕರಿಸಬೇಕೆಂದು ಕೋರಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾವು ಅದಕ್ಕೆ ಒಪ್ಪಿ ಆ ದಿನ ರಾತ್ರಿ 8.30 ಗಂಟೆಗೆ ಆರೋಪಿಯ ಅಂಗಡಿಯ ಬಳಿ ಹೋದಾಗ ಅಲ್ಲಿ ಒಬ್ಬ ವ್ಯಕ್ತಿ ಸಮವಸ್ತದಲ್ಲಿದ್ದ ಪೊಲೀಸರನ್ನು ನೋಡಿ ಓಡಿಹೋಗಲು ಪ್ರಯತ್ನಿಸಿದನು ಎಂದರೆ ಸರಿಯಲ್ಲ. ಆ ವ್ಯಕ್ತಿಯನ್ನು ಹಿಡಿದು ಆತನ ವಿವರವನ್ನು ಕೇಳಿ ಆತನ ಅಂಗಡಿಯ ಮುಂದೆ ಇದ್ದ ಪ್ಲಾಸ್ಟಿಕ್ ಹ್ಯಾಂಡ್ ಕವರ್ ನಲ್ಲಿ ಕಟ್ಟಿದ್ದ ವಸ್ತುವನ್ನು ಪರಿಶೀಲಿಸಿದ್ದು ಅದರಲ್ಲಿ 90 ಎಂ.ಎಲ್.24 original choice Deluxe whisky ಹಾಗೂ 180 ಎಂ ಎಲ್ Old towern whisky packet ಗಳು ಇದ್ದವು ಎಂದರೆ ಸರಿಯಲ್ಲ. ಅಲ್ಲಿ ಸಿಕ್ಕ ಮದ್ಯವನ್ನು ಪೊಲೀಸರು ನನ್ನ ಸಮಕ್ಷಮ ಅಮಾನತುಪಡಿಸಿಕೊಂಡರು ಮತ್ತು ನನ್ನ ಸಮಕ್ಷಮ ಮಹಜರ್ ನ್ನು ಆ ದಿನ 9.30 ರಿಂದ 10.30 ರವರೆಗೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ನನ್ನೊಂದಿಗೆ ಬಸವರಾಜು ರವರು ಸಹಿ ಹಾಕಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಎಂ ಓ 1 ಮತ್ತು 2 ನ್ನು ಸಾಕ್ಷಿಯು ನೋಡಿದ್ದು ಗುರುತಿಸಿರುವುದಿಲ್ಲ. ಆ ದಿನ ನಮೊಂದಿಗೆ ಕೃಷ್ಣೇಗೌಡ ರವರು ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿರುತ್ತಾರೆ.

**ಪಾಟೀ ಸವಾಲುಃ**

ಪಾಟೀ ಸವಾಲು ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು,**
**ಅರಕಲಗೂಡು.**